ಆ) ಟನಲ್ ಕೆಲಸವನ್ನು ಮುಗಿಸಲು ತಗಲುವ ವೆಚ್ಚವೆಷ್ಟು ?

ಇ) ಇದರ ಶ್ಯಾಫ್ಟ್‌ನ 2ರ ಕೆಲಸ ಇನ್ನೂ ಪ್ರಾರಂಭವಾಗಿಲ್ಲ ಏಕೆ ಮತ್ತು ಅದನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಎಷ್ಟು ಸಮಯದೊಳಗೆ ಅದನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಆ) ೧೦೯೭ ಮೀಟರ್.

ಆ) ೫೯೦ ಲಕ್ಷ ರೂ. ಗಳು.

ಇ) ಶಾಫ್ಟ್ ನಂ. 2 ರಲ್ಲಿ ಟಿ ಳ ಮತ್ತು ಟಿ ಗಿ ಎಂಬ ಎರಡು ಮುಖಗಳಿದ್ದು ಟಿ ಗಿ ಮುಖದ ಕೆಲಸ ಪೂರ್ತಿಯಾಗಿದೆ. ಟಿ ಳ ಮುಖದ ಕೆಲಸಗಳಲ್ಲಿ ಚಿಮಿಣಿ ಸಮಸ್ಯೆ ಎದುರಾದ್ದರಿಂದ ಕೆಲಸ ಸ್ಥಗಿತವಾಗಿದ್ದು ಪರಿಣತರ ಸಲಹೆಯನ್ನು ಪಡೆದು ಕೆಲಸವನ್ನು ಪ್ರಾರಂಭಿಸಲಾಗುವುದು. ಕೆಲಸವು ಏಪ್ರಿಲ್ ೧೯೯೧ ರಲ್ಲಿ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ.

ಅಮರ್ಜ ಮತ್ತು ಭೋರಿ ನದಿಗೆ ಸೇತುವೆ ಕಟ್ಟುವ ಬಗ್ಗೆ

೩೮೫ (೭೪೭) ಶ್ರೀ ಪಾಲಕಯ್ಯ ಗುತ್ತೇದಾರ್ (ಆಫಜಲ್‌ಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಆ) ಆಫಜಲ್‌ಪುರ ಕ್ಷೇತ್ರದಲ್ಲಿ ಅಮರ್ಜಾ ಮತ್ತು ಭೋರಿ ನದಿಯು ವಿಶಾಲವಾಗಿದ್ದು ಈ ನದಿಗೆ ಪ್ರತಿಯೊಂದು ೨. ಕಿ. ಮೀ. ಅಂತರದಲ್ಲಿ ಸೇತುವೆ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಆ) ಸಾರ್ವಜನಿಕರಿಗೆ ಅನುಕೂಲವಾಗುವುದರಿಂದ ಇದನ್ನು ಬೇಗನೆ ಕಾರ್ಯಗತಗೊಳಿಸುವಲ್ಲಿ ಸರ್ಕಾರವು ಶೀಘ್ರ ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು),—

ಆ) ೧) ಆಫಜಲಪುರ ಕ್ಷೇತ್ರದಲ್ಲಿನ ಗುಲ್ಬರ್ಗಾದಿಂದ ಹೊಸೂರಿಗೆ ಹೋಗುವ ರಾಜ್ಯ ಹೆದ್ದಾರಿ ಮೇಲೆ ಕಿ. ಮೀ. ೩೫ ರಲ್ಲಿ ಅಮರ್ಜಾ ನದಿಗೆ ಅಡ್ಡಲಾಗಿ ಕೆಳಮಟ್ಟದ ಸೇತುವೆ ಇರುವುದು ಮತ್ತು ಕಿ. ಮೀ. ೬೬ ರಲ್ಲಿ ಭೋರಿ ನದಿಗೆ, ಅಡ್ಡಲಾಗಿ ಇನ್ನೊಂದು ಕೆಳಮಟ್ಟದ ಸೇತುವೆಗಳಿವೆ.

೨) ಇದಲ್ಲದೆ ಭೋರಿ ನದಿಯ ಮೇಲೆ ಡಿಕ್ಸಂಗಾ 'ಕೆ' ಗ್ರಾಮದ ಹತ್ತಿರ ಒಂದು ಬ್ಯಾರೇಜ್-ಕಂ-ಬ್ರಿಡ್ಜ್‌ನ ಕೆಲಸವು ಈಗಾಗಲೇ ತೆಗೆದುಕೊಳ್ಳಲಾಗಿದ್ದು ಪ್ರಗತಿಯಲ್ಲಿರುತ್ತದೆ. ಇದು ಸುಮಾರು ೫ ಕಿ. ಮೀ. ಮೇಲಾಗೆಡೆ (ಆಪ್ ಸ್ಟ್ರೀಂ) ನಿರ್ಮಿಸಲಾಗುತ್ತದೆ.

೩) ಪ್ರತಿ ೨ ಕಿ. ಮೀ. ಅಂತರದಲ್ಲಿ ಸೇತುವೆ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಕಾರ್ಯಕ್ರಮದಲ್ಲಿಲ್ಲ,

ಆ) ಈ ಪ್ರಸ್ತಾವನೆ ಉದ್ಭವಿಸುವುದಿಲ್ಲ.

ಗಂಬ್ಬಿ ತಾಲ್ಲೂಕು ಕಲ್ಲೂರು ಗ್ರಾಮದ ಆಸ್ಪತ್ರೆ

೩೮೬ (೭೬೦) ಶ್ರೀ ಜಿ. ಎಸ್. ಶಿವನಂಜಪ್ಪ (ಗಂಬ್ಬಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಆ) ಗಂಬ್ಬಿ ತಾಲ್ಲೂಕು ಕಲ್ಲೂರು ಗ್ರಾಮವು ಬಡ ನೇಕಾರರ ಕೂಲಿಕಾರರ ಊರಾಗಿದ್ದು ಈ ಈ ಊರಿನ ಹೆಣ್ಣು ಮಕ್ಕಳಿಗೆ ಮಹಿಳಾ ವೈದ್ಯಾಧಿಕಾರಿಯಿಲ್ಲದೆ, ಹೆರಿಗೆ ವಾರ್ಡ್‌ಗಳಿಲ್ಲದೇ ತೊಂದರೆ ಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅ) ಈ ಊರಿಗೆ ಒಂದು ಮೆಟರ್ನಿಟಿ ವಾರ್ಡ್ ಅಥವಾ ಈಗಿರುವ ಆರೋಗ್ಯ ಘಟಕವನ್ನು ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಲು ಸಾರ್ವಜನಿಕರಿಂದ ಮನವಿ ಬಂದಿರುವುದು ನಿಜವೇ ?

ಇ) ಮೆಟರ್ನಿಟಿ ವಾರ್ಡ್‌ನ್ನು ಈ ವರ್ಷವೇ ಮಂಜೂರು ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಜೆ. ಎಸ್. ದೇಶ್‌ಮುಖ್ (ಆರೋಗ್ಯ ಕುಟುಂಬ ಕಲ್ಯಾಣ ಸಚಿವರು),—

ಅ) ಬಂದಿದೆ.

ಆ) ಹೌದು.

ಇ) ಈ ವರ್ಷ ಸಾಧ್ಯವಿಲ್ಲ. ಮುಂದಿನ ಆರ್ಥಿಕ ಸಾಲಿನಲ್ಲಿ (೧೯೮೯–೯೦)ರಲ್ಲಿ ಜಿಲ್ಲಾ ಪರಿಷತ್ ಅನುಮೋದಿಸಿ ಸಾಕಷ್ಟು ಹಣ ಒದಗಿಸಿದಲ್ಲಿ ಸೂಕ್ತ ಕ್ರಮಕೈಗೊಳ್ಳಲಾಗುವುದು.

ಸುಪ್ರೀಂ ಕೋರ್ಟಿನ ನ್ಯಾಯ ಪೀಠ ಬೆಂಗಳೂರಿನಲ್ಲಿ ಸ್ಥಾಪಿಸುವ ಬಗ್ಗೆ

೩೮೭ (೭೫೧) ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕ್ಷಿಪ್ರ ನ್ಯಾಯ ದಾನ ಹಾಗೂ ಕಡಿಮೆ ಖರ್ಚು ಮಾಡಿಸುವ ದೃಷ್ಟಿಯಿಂದ ಸುಪ್ರೀಂ ಕೋರ್ಟಿನ ನ್ಯಾಯ ಪೀಠವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಆ) ನ್ಯಾಯ ಪೀಠ ಬೆಂಗಳೂರಿನಲ್ಲಿ ಯಾವಾಗ ಅಸ್ತಿತ್ವಕ್ಕೆ ಬರಲಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಆ) ಈ ರೀತಿಯ ಯಾವ ಪ್ರಸ್ತಾವನೆಯೂ ಪ್ರಸ್ತುತ ಸರ್ಕಾರದ ಮುಂದಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು. ಬೆಂಗಳೂರು, ದಕ್ಷಿಣ ಭಾರತದ ಮಧ್ಯ ಭಾಗದಲ್ಲಿದ್ದು ಸರ್ವೋಚ್ಚ ನ್ಯಾಯಾಲಯದ ಪೀಠವನ್ನು ಸ್ಥಾಪಿಸಲ ಯೋಗ್ಯ ಸ್ಥಳವಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಂಡಲ್ಲಿ ರಾಜ್ಯ ಸರ್ಕಾರ ಎಲ್ಲ ರೀತಿಯ ಸೌಲಭ್ಯ ಅನುಕೂಲಗಳನ್ನು ಒದಗಿಸಿಕೊಡುವುದು.

ಸುಪ್ರೀಂ ಕೋರ್ಟಿನ ನ್ಯಾಯಪೀಠ ಸ್ಥಾಪಿಸಲು ತಗಲುವ ವೆಚ್ಚ

೩೮೮ (೭೫೧–ಎ) ಶ್ರೀ ಪಿ. ಎಂ. ಚಿಕ್ಕ ಬೋರಯ್ಯ (ಚಾಮರಾಜ). –ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕ್ಷಿಪ್ರ ನ್ಯಾಯದಾನ ದೃಷ್ಟಿಯಿಂದ ವಿಭಾಗ ಕೇಂದ್ರಗಳಲ್ಲಿ ರಾಜ್ಯ ಹೈಕೋರ್ಟಿನ ಒಂದೊಂದು ಪೀಠಗಳನ್ನೇ ತೆರೆಯುವಲ್ಲಿ ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಆ) ಹಾಗೆ ತೆರೆಯುವುದರಿಂದ ರಾಜ್ಯ ಸರ್ಕಾರಕ್ಕೆ ಆಗುವ ವೆಚ್ಚವೆಷ್ಟು ? ಮತ್ತು ಈ ಬಗ್ಗೆ ಇರುವ ತೊಂದರೆಗಳೇನು ?

ಶ್ರೀ ಎಸ್, ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಈ ರೀತಿಯ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರಲಿಲ್ಲ ಮತ್ತು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.